# ರಿಲಯನ್ಸ್ ಕಂಪನಿಗೆ ದೇಶದ ಸಂಪತ್ತು ಒತ್ತೆಯಿಡುವವರನ್ನು ತಿರಸ್ಕರಿಸಿ





## ಸಿಪಿಐ(ಎಂ)ಗೆ ಮತ ನೀಡಿ
## ಎಡಪಕ್ಷಗಳನ್ನು ಬಲಪಡಿಸಿ

ನಾವು ಮನೆಗಳಲ್ಲಿ ಬಳಸುವ ಅಡುಗೆ ಅನಿಲ, ರಸಗೊಬ್ಬರ ಮತ್ತು ವಿದ್ಯುತ್ ಉತ್ಪಾದನೆಗೆ ಬಳಸುವ ಅನಿಲ ಇವೆಲ್ಲವನ್ನು ಭೂಮಿಯೊಳಗಿಂದ ತೆಗೆಯಬೇಕು. ನಮ್ಮ ದೇಶ ಇದನ್ನು ಸ್ವಲ್ಪ ಪ್ರಮಾಣದಲ್ಲಿ ದೇಶೀಯವಾಗಿ ಉತ್ಪಾದಿಸುತ್ತಿತ್ತು ಮತ್ತು ಹೆಚ್ಚಿನ ಭಾಗ ವಿದೇಶಗಳಿಂದ ಆಮದು ಮಾಡುತ್ತಿತ್ತು. ನಮ್ಮ ದೇಶದಲ್ಲಿ ಮೊದಲಿಗೆ ಸರ್ಕಾರದ ಓಎನ್‌ಜಿಸಿ (ONGC) ಕಂಪನಿ ಗ್ಯಾಸ್ ಉತ್ಪಾದಿಸುತ್ತಿತ್ತು. ಅದನ್ನು ಸರ್ಕಾರದೇ ಕಂಪನಿಗಳಾದ ಐಓಸಿ (IOC), ಬಿಪಿಸಿಎಲ್ (BPCL) ಮತ್ತು ಹೆಚ್‌ಪಿಸಿಎಲ್ (HPCL) ಕಂಪನಿಗಳು ಖರೀದಿಸಿ ಮಾರುತ್ತಿದ್ದವು. ಓಎನ್‌ಜಿಸಿ ಕಂಪನಿಯು ಪ್ರತಿ ಎಂಎಂಬಿಟಿಯು(MMBTU - ಮಿಲಿಯನ್ ಮೆಟ್ರಿಕ್ ಬ್ರಿಟಿಷ್ ಥರ್ಮಲ್ ಯೂನಿಟ್) ಅನಿಲವನ್ನು 2005–2008 ರ ಅವಧಿಯಲ್ಲಿ ಕೇವಲ 1.8 ಡಾಲರ್‌ಗಳಿಗೆ ಮಾರುತ್ತಿತ್ತು.

ತೈಲ ಮತ್ತು ಗ್ಯಾಸ್‌ನ್ನು ದೇಶೀಯವಾಗಿ ಉತ್ಪಾದನೆಯನ್ನು ಮಾಡಬೇಕೆಂಬ ಕಾರಣದಿಂದ ಸಂಶೋಧನೆಗಳನ್ನು ಮಾಡಿದ್ದರಿಂದ ತೈಲ ಮತ್ತು ಅನಿಲ ನಿಕ್ಷೇಪಗಳು ಹಲವಾರು ಕಡೆ ಪತ್ತೆಯಾದವು. ಆದರೆ ಸರ್ಕಾರದ ಖಾಸಗೀಕರಣದ ನೀತಿಯಿಂದಾಗಿ ದೇಶದೊಳಗೆ ಹೊಸದಾಗಿ ಕಂಡುಹಿಡಿದ ಅನಿಲ ನಿಕ್ಷೇಪಗಳನ್ನು ಖಾಸಗಿಯವರಿಗೆ ವಹಿಸಲಾಯಿತು.ಆಂಧ್ರಪ್ರದೇಶದ ಕೃಷ್ಣ–ಗೋದಾವರಿ ನದಿಗಳ ಬಯಲಿನ ಸುಮಾರು 8000 ಚದರ ಕಿ.ಮೀ. ಪ್ರದೇಶವನ್ನು ರಿಲಯನ್ಸ್ ಕಂಪನಿಗೆ ಗ್ಯಾಸ್ ಉತ್ಪಾದನೆಗೆಂದು ನೀಡಲಾಯಿತು. ಇದನ್ನು ಕೆಜಿ–ಕಣಿವೆ ಡಿ–6 ಬ್ಲಾಕ್ ಪ್ರದೇಶವೆಂದಲೂ ಕರೆಯುತ್ತಾರೆ (KG-Basin D-6 Block) ಇಲ್ಲಿ ರಿಲಯನ್ಸ್ ಕಂಪನಿ ಉತ್ಪಾದಿಸುತ್ತಿರುವ ಗ್ಯಾಸ್ ಮತ್ತು ಅದು ಮಾರಾಟ ಮಾಡುತ್ತಿರುವ ದರ ದೇಶದಲ್ಲೇ ಬೃಹತ್ ಹಗರಣ – ಕೆಜಿ ಹಗರಣ – ಎಂದು ಪ್ರಸಿದ್ಧಿಯಾಗಿದೆ.

*ಇತ್ತೀಚೆಗೆ ಸಿಎಜಿ ಬಹಿರಂಗ ಮಾಡಿರುವ ಪ್ರಾಥಮಿಕ ವರದಿಯ ಪ್ರಕಾರ ಮತ್ತು ಸಿಪಿಐ(ಎಂ) ಪಕ್ಷದ ಸಂಸದರಾದ ಬಸುದೇವ ಆಚಾರ್ಯ ಮತ್ತು ತಪನ್ ಸೇನ್‌ರವರು 2007ರಲ್ಲೇ ಹೇಳಿದ ಹಾಗೆ, ಗ್ಯಾಸ್ ಉತ್ಪಾದನೆಯನ್ನು ರಿಲಯನ್ಸ್ ಕಂಪನಿಗೆ ನೀಡಿರುವುದರಲ್ಲಿ ದೇಶಕ್ಕೆ ಲಕ್ಷಾಂತರ ಕೋಟಿ ನಷ್ಟವಾಗಲಿದೆ. ಇಂತಹ ನಷ್ಟವನ್ನುಂಟು ಮಾಡಲು ಕಾಂಗ್ರೆಸ್ ಸರ್ಕಾರ ಮತ್ತು ವಿಶೇಷವಾಗಿ ಶ್ರೀ ವೀರಪ್ಪ ಮೊಯಿಲಿಯವರು ಪ್ರಮುಖ ಪಾತ್ರ ವಹಿಸಿದ್ದಾರೆ.*

**ಇವರುಗಳು ದೇಶಕ್ಕೆ ಮತ್ತು ಭಾರತದ ಜನರಿಗೆ ವಂಚನೆ ಮಾಡಿದ್ದು ಮತ್ತು ರಿಲಯನ್ಸ್ ಕಂಪನಿಗೆ ಸಹಾಯ ಮಾಡಿದ್ದು ಹೇಗೆಂಬುದನ್ನು ತಿಳಿದುಕೊಳ್ಳುವುದು ಅಗತ್ಯ.**

ಕೆಜಿ ಕಣಿವೆಯಲ್ಲಿ ರಿಲಯನ್ಸ್ ಕಂಪನಿ ಉತ್ಪಾದಿಸುವ ಗ್ಯಾಸ್‌ಗೆ ಯಾವ ದರವನ್ನು ನೀಡಬೇಕೆಂದು ಆಗ ತೀವ್ರವಾದ ಚರ್ಚೆಗಳು ನಡೆದವು. ವಿದ್ಯುತ್ ಮತ್ತು ರಸಗೊಬ್ಬರ

ಸಚಿವಾಲಯಗಳ ತೀವ್ರ ವಿರೋಧವಿದ್ದರೂ *2007 ರಲ್ಲಿ ಪ್ರತಿ ಯೂನಿಟ್‌ಗೆ 4.2 ಡಾಲರ್ (ಇಂದಿನ ದರಗಳಲ್ಲಿ ರೂ.252) ಎಂದು ಪ್ರಣವ್ ಮುಖರ್ಜಿಯವರ ನೇತೃತ್ವದ ಮಂತ್ರಿಗಳ ಗುಂಪಿನ ಶಿಫಾರಸ್ಸನ್ನು ಸರ್ಕಾರ ಜಾರಿ ಮಾಡಿತು. ಇದು ರಿಲಯನ್ಸ್ ಕಂಪನಿಗೆ ಕಾಂಗ್ರೆಸ್ ಸರ್ಕಾರ ಕೊಟ್ಟ ಬೃಹತ್ ಉಡುಗೊರೆಯಾಗಿತ್ತು..* ಏಕೆಂದರೆ ಅಷ್ಟೊತ್ತಿಗೆ ಅಂಬಾನಿ ಸಹೋದರರಾದ ಮುಖೇಶ್ ಮತ್ತು ಅನಿಲ್ ನಡುವೆ ಗ್ಯಾಸ್ ಪೂರೈಕೆ ವಿಚಾರದಲ್ಲಿ ಕೋರ್ಟ್‌ನಲ್ಲಿ ಕೇಸ್ ನಡೆಯುತ್ತಿತ್ತು. ಅದರಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ನೀಡಿದ್ದ ಹೇಳಿಕೆ ಪ್ರಕಾರವೇ 1 ಯೂನಿಟ್ ಗ್ಯಾಸ್ ಉತ್ಪಾದಿಸಲು 1.43 ಡಾಲರ್ (ಇಂದಿನ ದರಗಳಲ್ಲಿ ರೂ. 85.8) ಖರ್ಚಾಗುತ್ತಿತ್ತು. ಆದರೆ ಕಾಂಗ್ರೆಸ್ ಸರ್ಕಾರ 3 ಪಟ್ಟು ಹೆಚ್ಚು ದರವನ್ನು ನಿಗದಿ ಮಾಡಿತು! ರಿಲಯನ್ಸ್ ಕಂಪನಿ ಕೋರ್ಟ್‌ನಲ್ಲಿ ಹೇಳಿದ್ದಕ್ಕಿಂತಲೂ ಮೂರು ಪಟ್ಟು ಹೆಚ್ಚುವರಿಯಾಗಿ ಕಾಂಗ್ರೆಸ್ ಸರ್ಕಾರ ನಿಗದಿಪಡಿಸಿದ್ದು ಯಾಕೆ?

ಇದಕ್ಕೂ ಮೊದಲು ಎನ್‌ಟಿಪಿಸಿ(NTPC)ಯ ಕವಾಸ್ ಮತ್ತು ಗಾಂಧಾರ್ ವಿದ್ಯುತ್ ಘಟಕಗಳಿಗೆ ಗ್ಯಾಸ್ ಪೂರೈಸಲು 17 ವರ್ಷಗಳ ಅವಧಿಗೆ ರಿಲಯನ್ಸ್ ಒಪ್ಪಂದ ಮಾಡಿಕೊಂಡಿತ್ತು. ಈ ಒಪ್ಪಂದದ ಪ್ರಕಾರ 2.34 ಡಾಲರ್ (ಇಂದಿನ ದರಗಳಲ್ಲಿ ರೂ. 140.4) ದರವನ್ನು ರಿಲಯನ್ಸ್ ನಮೂದಿಸಿತ್ತು. ಈ ದರದಲ್ಲಿ ರಿಲಯನ್ಸ್ ಅನಿಲವನ್ನು ಪೂರೈಸಿದ್ದರೂ ಅದು ವಿಪರೀತ ಲಾಭವನ್ನೇ ಮಾಡುತ್ತಿತ್ತು. ಆದರೆ ಸರ್ಕಾರವೇ 4.2 ಡಾಲರ್‌ಗಳನ್ನು ನಿಗದಿ ಮಾಡಿದ್ದರಿಂದ NTPCಯೊಂದಿಗಿನ ಕಡಿಮೆ ಪ್ರಸ್ತಾಪವನ್ನು ರಿಲಯನ್ಸ್ ರದ್ದುಪಡಿಸಿತು. ಸರ್ಕಾರವೇ ಮುಂದೆ ನಿಂತು ರಿಲಯನ್ಸ್ ಕಂಪನಿಯ ಅನಿಲವನ್ನು ದುಬಾರಿ ಬೆಲೆಗೆ ಸರ್ಕಾರದ ಕಂಪನಿಗಳಿಗೇ ಮಾರುವಂತೆ ಮಾಡಿತು! ಇಲ್ಲಿ ನಡೆದಿರುವ ಎಲ್ಲಾ ಅವ್ಯವಹಾರಗಳನ್ನು ಸಿಎಜಿ ಬಯಲಿಗೆಳೆಯಿತು. ಭಾರತ ದೇಶಕ್ಕಾಗುತ್ತಿರುವ ಲಕ್ಷಾಂತರ ಕೋಟಿ ರೂಗಳ ನಷ್ಟವನ್ನು ಬಯಲಿಗೆಳೆದ ಸಿಎಜಿ ವರದಿಯನ್ನು ಸರ್ಕಾರ ಕಾಲಕಸವನ್ನಾಗಿ ಮಾಡಿತು.

*ಇದಿನ್ನೂ ಹಸಿರಾಗಿರುವಾಗಲೇ 2013 ರಲ್ಲಿ ಗ್ಯಾಸ್ ದರಗಳನ್ನು ಕೇಂದ್ರ ಸರ್ಕಾರ 4.2 ರಿಂದ 8.4 ಡಾಲರ್‌ಗಳಿಗೆ(ಇಂದಿನ ದರಗಳಲ್ಲಿ ರೂ. 252 ರಿಂದ ರೂ. 504) ಎರಡು ಪಟ್ಟು ಹೆಚ್ಚಳ ಮಾಡಿತು. ಮುಂದಿನ ಐದು ವರ್ಷಗಳಿಗೆ ಅನ್ವಯಿಸಿ ಈ ಹೆಚ್ಚಳವಾಗಿತ್ತು.*

ಇಲ್ಲಿನ ನಿಜವಾದ ಉತ್ಪಾದನಾ ವೆಚ್ಚಗಳನ್ನು ಆಧರಿಸಿ ದರ ನಿಗದಿಪಡಿಸುವ ಬದಲಿಗೆ ನಮಗೆ ಸಂಬಂಧವೇ ಇಲ್ಲದ ಜಪಾನ್, ಯೂರೋಪ್ ಮತ್ತು ಅಮೇರಿಕದ ಮಾರುಕಟ್ಟೆ ದರಗಳನ್ನು ಆಧರಿಸಿ ಈ ದರಗಳನ್ನು ಹೆಚ್ಚಳ ಮಾಡಲಾಯಿತು. ವಿಶೇಷವೆಂದರೆ ಈ ದರ ಏರಿಕೆಯನ್ನು ಕೇಂದ್ರ ಸರ್ಕಾರದ ರಸಗೊಬ್ಬರ ಮತ್ತು ವಿದ್ಯುತ್ ಸಚಿವಾಲಯಗಳೇ, ರಸಗೊಬ್ಬರ ಮತ್ತು ವಿದ್ಯುತ್ ಉತ್ಪಾದನೆಯ ವೆಚ್ಚ

ವಿಪರೀತವಾಗಿ ಹೆಚ್ಚುತ್ತದೆ ಎಂಬ ಕಾರಣದಿಂದ ವಿರೋಧಿಸಿದ್ದವು. ಇದಕ್ಕೆ ವಿರುದ್ಧವಾಗಿ ಪೆಟ್ರೋಲಿಯಂ ಸಚಿವರಾಗಿರುವ ಸನ್ಮಾನ್ಯ ಶ್ರೀ ವೀರಪ್ಪ ಮೊಯಿಲಿಯವರು ಇದಕ್ಕಿಂತಲೂ ಹೆಚ್ಚಿನ ದರಗಳನ್ನು ನಿಗದಿಪಡಿಸಲು ಒತ್ತಾಯಿಸಿದ್ದರು! ಮೊಯಿಲಿಯವರ ಸಚಿವಾಲಯವು ಇನ್ನೂ ಎಲ್ಲಿಗೆ ವಾದ ಮಾಡಿತೆಂದರೆ 8.4 ಡಾಲರ್‌ನ್ನು ಮೊದಲ ಮೂರು ವರ್ಷಕ್ಕೆ ಸೀಮಿತಗೊಳಿಸಿ ಕೊನೆಯ ಎರಡು ವರ್ಷಗಳಿಗೆ ಪ್ರತಿ ಎಂಎಂಬಿಟಿಯುಗೆ 14 ಡಾಲರ್ ನಿಗದಿ ಮಾಡಬೇಕೆಂದು ಒತ್ತಾಯಿಸಿತು!

**ಸುಳ್ಳಿನ ಕಂತೆಗಳ ಉತ್ಪ್ರೇಕ್ಷಿತ ವೆಚ್ಚವನ್ನು ತೋರಿಸಿದ ರಿಲಯನ್ಸ್ ಕಂಪನಿಯ ವಾದವನ್ನೇ ಶ್ರೀ ವೀರಪ್ಪ ಮೊಯಿಲಿಯವರು ಅನುಮೋದಿಸಿದರು. ಈಗಲೂ ಅದರ ವಕ್ತಾರರೋ ಎಂಬಂತೆ ಮೊಯಿಲಿಯವರು ರಿಲಯನ್ಸ್ ಕಂಪನಿಯ ವಾದವನ್ನೇ ಮಾಡುತ್ತಿದ್ದಾರೆ. ಯಾಕೆ?**


ವೀರಪ್ಪ ಮೊಯಿಲಿಯವರಿಗೂ ಮೊದಲು ಜೈಪಾಲ್‌ರೆಡ್ಡಿಯವರು ಪೆಟ್ರೋಲಿಯಂ ಮಂತ್ರಿಯಾಗಿದ್ದರು. ಆಗ ರಿಲಯನ್ಸ್ ಕಂಪನಿಯು ಪ್ರತಿ ಯೂನಿಟ್ ಗ್ಯಾಸ್‌ನ ದರವನ್ನು 4.2 ಡಾಲರುಗಳಿಂದ ಸುಮಾರು 12 ಡಾಲರ್‌ಗಳಿಗೆ (ರೂ.720) ಹೆಚ್ಚಿಸಬೇಕೆಂದು ಬೇಡಿಕೆಯಿಟ್ಟಿತ್ತು. ಇದನ್ನು ಒಂದಿಷ್ಟು ಅನುಮಾನಿಸಿದ ಕಾರಣಕ್ಕೆ ಜೈಪಾಲ್‌ರೆಡ್ಡಿಯವರನ್ನು ರಾತ್ರೋರಾತ್ರಿ ಪೆಟ್ರೋಲಿಯಂ ಖಾತೆಯಿಂದ ಕಿತ್ತು ಬಿಸಾಕಿದರು. ರಿಲಯನ್ಸ್ ಕಂಪನಿಯ ಹಿಡಿತ ಅಷ್ಟು ಗಟ್ಟಿಯಾಗಿದ್ದುದನ್ನು ಇದು ತೋರಿಸಿತು. ಆಗ ಪೆಟ್ರೋಲ್ ಇಲಾಖೆಗೆ ಮಂತ್ರಿಯಾದವರೇ ರಿಲಯನ್ಸ್‌ನ ಕಂಪನಿಯ ಪ್ರೀತಿಪಾತ್ರರಾದಂತಹ ಶ್ರೀ ವೀರಪ್ಪ ಮೊಯಿಲಿಯವರು. ಇವರು ಮಂತ್ರಿಯಾದ ಕೂಡಲೇ ಒಂದೇ ಬಾರಿಗೆ ಎರಡು ಪಟ್ಟು ಹೆಚ್ಚಿನ ದರವನ್ನು ರಿಲಯನ್ಸ್ ಕಂಪನಿಗೆ ಸಿಗುವಂತೆ ತೀರ್ಮಾನ ಮಾಡಿದರು. ಇದರಿಂದ ವೀರಪ್ಪ ಮೊಯಿಲಿಯವರು ಮತ್ತು ರಿಲಯನ್ಸ್ ಕಂಪನಿಯ ಸಂಬಂಧ ಎಂತಹುದು ಎಂದು ಅನುಮಾನಗಳಿಲ್ಲದೆ ಗೊತ್ತಾಯಿತು.

ದರ ಹೆಚ್ಚಿಗೆ ನಿಗದಿ ಮಾಡಲು ರಿಲಯನ್ಸ್ ಕಂಪನಿ (ಜೊತೆಯಲ್ಲಿ ಕಾಂಗ್ರೆಸ್ ಸರ್ಕಾರವೂ ಸೇರಿ) ಒಂದು ನಾಟಕವಾಡಿತು. ಹಿಂದಿನ ಒಪ್ಪಂದದಲ್ಲಿ ಉತ್ಪಾದನಾ ಹಂಚಿಕೆ ಸೂತ್ರದ ಪ್ರಕಾರ ಭಾರತ ಸರ್ಕಾರಕ್ಕೆ ಲಾಭ ಬರುತ್ತಿತ್ತು. ಇದನ್ನು ತಪ್ಪಿಸಿ ಪೂರ್ತಿ ಲಾಭವನ್ನು ತಾನೇ ಹೊಡೆದುಕೊಳ್ಳಬೇಕೆಂದು ರಿಲಯನ್ಸ್ ಕಂಪನಿಯು ತನ್ನ ಉತ್ಪಾದನಾ ಸಾಮರ್ಥ್ಯವನ್ನು ಪ್ರತಿದಿನ 40 ರಿಂದ 80 ದಶಲಕ್ಷ ದಶಲಕ್ಷ ಘನ ಮೀಟರ್‌ಗಳಿಗೆ (40 Million MMSCD - 80 Million MMSCD) ಹೆಚ್ಚಿಸುತ್ತಿದ್ದೇನೆಂದು ಮತ್ತು ಅದಕ್ಕಾಗಿ ಹೆಚ್ಚುವರಿ ಬಂಡವಾಳ ಹೂಡುತ್ತಿದ್ದೇನೆಂಬ ಸುಳ್ಳುಗಳನ್ನು ಹೇಳಿತು. ಸರ್ಕಾರಕ್ಕೆ ಬರುತ್ತಿದ್ದ ಲಾಭಕ್ಕೆ ನಾಮ ಹಾಕಲು ಯೋಜಿಸಿತು. ಈ ಬಗ್ಗೆ ಸಿಪಿಐ(ಎಂ)ನ (ದಿ|)ದೀಪಂಕರ್ ಮುಖರ್ಜಿ ಮತ್ತು ಸಂಸದರಾದ ತಪನ್ ಸೇನ್‌ರವರು ಅಂಕಿ–ಅಂಶಗಳ ಸಮೇತ ರಿಲಯನ್ಸ್‌ನ ಮೋಸದ ನಾಟಕವನ್ನು ಬಯಲಿಗೆಳೆದರು. ಸರ್ಕಾರಕ್ಕೆ




ಅದು ಮಾಯಾ, ರಾಹುಲ್ ಬಾಬಾ ಜಗಳವಲ್ಲ, ಸಾರ್, ಅಂಬಾನಿ ಸೋದರರ ಕಿತ್ತಾಟ

2007ರಲ್ಲಿ ಅಂಬಾನಿ ಸಹೋದರರಾದ ಮುಖೇಶ್ ಮತ್ತು ಅನಿಲ್ ನಡುವೆ ಗ್ಯಾಸ್ ಪೂರೈಕೆ ವಿಚಾರದಲ್ಲಿ ಕೋರ್ಟ್‌ನಲ್ಲಿ ಕೇಸ್ ನಡೆಯುತ್ತಿದ್ದಾಗ ರಿಲಯನ್ಸ್ ಇಂಡಸ್ಟ್ರೀಸ್ ನೀಡಿದ್ದ ಹೇಳಿಕೆ ಪ್ರಕಾರವೇ 1 ಯೂನಿಟ್ ಗ್ಯಾಸ್ ಉತ್ಪಾದಿಸಲು 1.43 ಡಾಲರ್ ಖರ್ಚಾಗುತ್ತಿತ್ತು. ಆದರೆ ಕಾಂಗ್ರೆಸ್ ಸರ್ಕಾರ 3 ಪಟ್ಟು ಹೆಚ್ಚು ದರವನ್ನು ನಿಗದಿ ಮಾಡಿತು! ರಿಲಯನ್ಸ್ ಕಂಪನಿ ಕೋರ್ಟ್‌ನಲ್ಲಿ ಹೇಳಿದ್ದಕ್ಕಿಂತಲೂ ಮೂರು ಪಟ್ಟು ಹೆಚ್ಚುವರಿಯಾಗಿ ಕಾಂಗ್ರೆಸ್ ಸರ್ಕಾರ ನಿಗದಿಪಡಿಸಿದ್ದು ಯಾಕೆ?



ರಿಲಯಂಸ್: ಸಿಎಜಿ ವರದಿ ಗಮನಿಸದ್ದು
(ಆಳುವ ವರ್ಗಗಳ ರಾಜಕಾರಣಿಗಳ ಪಾತ್ರ?)



ಮತ್ತು ಪ್ರಧಾನ ಮಂತ್ರಿಗಳಿಗೆ ವಿವರವಾದ ಪತ್ರಗಳನ್ನು ಬರೆದರು. ಆದರೆ ಸರ್ಕಾರ ಕಿವುಡುತನ ಮತ್ತು ಕುರುಡುತನ ಎರಡನ್ನೂ ಪ್ರದರ್ಶಿಸಿತು. ವಾಸ್ತವದಲ್ಲಿ ರಿಲಯನ್ಸ್ ಕಂಪನಿ ಗ್ಯಾಸ್ ಉತ್ಪಾದನೆಯನ್ನು ಜಾಸ್ತಿ ಮಾಡುವ ಬದಲಿಗೆ ಕಡಿಮೆ ಮಾಡಿ ಒತ್ತಡದ ತಂತ್ರಗಳನ್ನು ಪ್ರಾರಂಭಿಸಿತು. ಇಂತಹ ಸಂದರ್ಭದಲ್ಲಿ ನಿರ್ದಾಕ್ಷಿಣ್ಯವಾಗಿ ರಿಲಯನ್ಸ್ ಕಂಪನಿ ವಿರುದ್ಧ ವ್ಯವಹರಿಸಬೇಕಿದ್ದ ಸರ್ಕಾರ ಮತ್ತು ಮೊಯಿಲಿಯವರು, ಅದರ ಲೂಟಿಗೆ ನಿರ್ಲಜ್ಜವಾಗಿ ಸಹಾಯ ಮಾಡಲು ನಿಂತರು.

ರಿಲಯನ್ಸ್ ಕಂಪನಿಯು ದರ ಏರಿಕೆ ಮಾಡಿಸಿಕೊಳ್ಳಲು ಮತ್ತೊಂದು ವಾದವನ್ನು ಮಾಡಿತು. ವಿದೇಶಗಳಲ್ಲಿ ಗ್ಯಾಸ್ ಉತ್ಪಾದನೆಯ ಬೆಲೆ ಹೆಚ್ಚಿರುವುದರಿಂದ ಅದೇ ದರವನ್ನು ನಮ್ಮ ದೇಶದಲ್ಲೂ ನಿಗದಿ ಮಾಡಬೇಕು ಎಂದಿತು. ಅಂದರೆ ಜಪಾನ್, ಅಮೇರಿಕ ಮತ್ತು ಯೂರೋಪ್‌ಗಳಲ್ಲಿ ಯಾವ ಉತ್ಪಾದನಾ ವೆಚ್ಚವಿದೆಯೋ ಅದಕ್ಕೆ ಸರಿಸಮಾನವಾಗಿ ಭಾರತದಲ್ಲಿಯೂ ದರಗಳನ್ನು ನಿಗದಿ ಮಾಡಬೇಕೆಂದು ವಾದಿಸಿತು.

*ಈ ವಾದದಲ್ಲಿರುವ ಎರಡು ಸಮಸ್ಯೆಗಳನ್ನು ನಾವು ಗುರುತಿಸಬೇಕಾಗಿದೆ. ಭಾರತದಲ್ಲಿ ತಯಾರಾಗುವ ಗ್ಯಾಸ್‌ಗೆ ಅಂತರರಾಷ್ಟ್ರೀಯ ದರಗಳನ್ನು ಯಾಕೆ ನಿಗದಿ ಮಾಡಬೇಕು? ಮತ್ತು ಇಷ್ಟಕ್ಕೂ ಬೇರೆ ಎಲ್ಲಾ ದೇಶಗಳಲ್ಲಿ ದುಬಾರಿ ದರವೇ ಇದೆಯೇ?*

ಈ ಎರಡೂ ಪ್ರಶ್ನೆಗಳಿಗೆ ಮೊಯಿಲಿಯವರ ಜ್ಞಾನ ಭಂಡಾರ ಇನ್ನೂ ಬೆಳಕನ್ನು ಚೆಲ್ಲಲು ಆಗಿಲ್ಲ. ಅಸಲಿಗೆ ಈ ರೀತಿ ಹೋಲಿಕೆ ಮಾಡುವುದೇ ಒಂದು ಮೂರ್ಖತನ. ಈ ಮೂರ್ಖತನವನ್ನೇ ಪರಿಗಣಿಸಿ ನೋಡಿದರೂ ಭಾರತದಲ್ಲಿ ತಯಾರಾಗುವ ಗ್ಯಾಸ್‌ಗೆ ಯಾಕೆ ವಿದೇಶಗಳಲ್ಲಿರುವ ದರಗಳನ್ನು ಆಧಾರವಾಗಿಟ್ಟುಕೊಳ್ಳಬೇಕು? ಆಂಧ್ರಪ್ರದೇಶದಲ್ಲಿರುವ ಕೃಷ್ಣ–ಗೋದಾವರಿ ನದಿಗಳ ಪಾತ್ರದಲ್ಲಿ ಉತ್ಪಾದನೆಯಾಗುವ ಗ್ಯಾಸ್‌ಗೆ ರಿಲಯನ್ಸ್ ಕಂಪನಿ ಅಮೇರಿಕದ ಡಾಲರ್‌ಗಳನ್ನೇನೂ ಖರ್ಚು ಮಾಡುವುದಿಲ್ಲ. ಭಾರತದ ರೂಪಾಯಿಗಳನ್ನು ಖರ್ಚು ಮಾಡಿ ಅಲ್ಲಿ ಗ್ಯಾಸ್ ಉತ್ಪಾದಿಸಲಾಗುತ್ತೆ. ಇಲ್ಲಿ ಗ್ಯಾಸ್ ಉತ್ಪತ್ತಿ ಮಾಡಲು ವಿದೇಶಗಳಿಂದ ಏನನ್ನೂ ಆಮದು ಮಾಡುವುದಿಲ್ಲ. ಏನನ್ನೂ ಆಮದು ಮಾಡದಿದ್ದ ಮೇಲೆ ಡಾಲರ್‌ಗಳ ಪ್ರಶ್ನೆ ಉದ್ಭವಿಸುವುದಿಲ್ಲ.

*ಇಲ್ಲಿ ತಯಾರಾಗುವ ಗ್ಯಾಸ್‌ಗೂ ಅಂತರರಾಷ್ಟ್ರೀಯವಾಗಿ ಏರುಪೇರಾಗುವ ರೂಪಾಯಿಯ ಬೆಲೆಗೂ ಯಾವುದೇ ಸಂಬಂಧವಿಲ್ಲ. ಹಾಗಾದರೆ ರಿಲಯನ್ಸ್ ಕಂಪನಿಯಾಗಲೀ ಭಾರತ ಸರ್ಕಾರವಾಗಲೀ ಡಾಲರ್‌ನ್ನು ಆಧಾರವಾಗಿ ಇಟ್ಟುಕೊಂಡಿರುವುದೇಕೆ?*

ರಿಲಯನ್ಸ್ ಕಂಪನಿಯಿಂದ ಯಾವ ದರಕ್ಕೆ ಗ್ಯಾಸ್ ಖರೀದಿ ಮಾಡಬೇಕೆಂಬ ಕುರಿತು ತಜ್ಞರ ಶಿಫಾರಸು ಪಡೆಯುವ ನೆಪದಲ್ಲಿ ಅರ್‌ಬಿಐನ ನಿವೃತ್ತ ಗವರ್ನರ್

ರಂಗರಾಜನ್ ಸಮಿತಿಯನ್ನು ಸರ್ಕಾರ ನೇಮಿಸಿತು. ಈ ಸಮಿತಿಯು ಒಂದು ಅಸಂಬದ್ಧ ಸೂತ್ರವನ್ನು ಶಿಫಾರಸ್ಸು ಮಾಡಿತು. ಅದೇನೆಂದರೆ ಭಾರತಕ್ಕೆ ಆಮದಾಗುವ ದ್ರವೀಕೃತ ನೈಸರ್ಗಿಕ ಅನಿಲದ 12 ತಿಂಗಳ ಸರಾಸರಿ ಬೆಲೆ ಮತ್ತು ಅಮೇರಿಕ, ಜಪಾನ್ ಮತ್ತು ಯೂರೋಪ್‌ನಲ್ಲಿರುವ ಬೆಲೆಗಳನ್ನು ಆಧಾರವಾಗಿಟ್ಟುಕೊಂಡು ಗ್ಯಾಸ್ ಬೆಲೆಗಳನ್ನು ನಿಗದಿಪಡಿಸಬೇಕು. ಇಲ್ಲಿನ ಸಮಸ್ಯೆಯೇನೆಂದರೆ, ಭಾರತದೊಳಗೇ ತಯಾರಾಗುವ ಗ್ಯಾಸ್‌ನ ಬೆಲೆಯನ್ನು ಆಮದು ಮಾಡಿಕೊಳ್ಳುವ ಗ್ಯಾಸ್ ಬೆಲೆ ಮತ್ತು ಇನ್ನಾವುದೋ ದೇಶದಲ್ಲಿರುವ ಗ್ಯಾಸ್ ಬೆಲೆಯನ್ನು ಆಧರಿಸಿ ಯಾಕೆ ತೀರ್ಮಾನಿಸಬೇಕು ಎಂಬುದು. ಇದರಲ್ಲಿ ಯಾವುದೇ ರೀತಿಯ ತರ್ಕವೂ ಕಾಣಿಸುವುದಿಲ್ಲ.

**ಗ್ಯಾಸ್ ದರಗಳನ್ನು ಅಂತರರಾಷ್ಟ್ರೀಯ ದರಗಳಿಗೆ ಹೊಂದಿಸುವ ಈ ಬೋಗಸ್ ಸೂತ್ರಗಳಿಗೆ ಸಿಪಿಐ(ಎಂ) ಪಕ್ಷವು ನಿರಂತರವಾಗಿ ವಿರೋಧಿಸುತ್ತಾ ಬಂದಿದೆ. ಸಿಪಿಐ(ಎಂ) ಸಂಸದರು ಮತ್ತು ಪೆಟ್ರೋಲಿಯಂ ಸಚಿವಾಲಯದ ಸಂಸತ್ತಿನ ಸ್ಥಾಯಿ ಸಮಿತಿಯ ಸದಸ್ಯರಾದ ತಪನ್ ಸೇನ್‌ರವರು ಈ ಕುರಿತು ಹಲವು ಬಾರಿ ಪ್ರಶ್ನಿಸಿದ್ದಾರೆ.**

ಭಾರತದ ಕ್ರಿಭ್ಕೋ ಮತ್ತು ಇಫ್ಕೋ ಸಂಸ್ಥೆಗಳು ಒಮಾನ್ ದೇಶದಲ್ಲಿ 2006ರಿಂದ ಪ್ರತಿ ಯೂನಿಟ್ (MMBTU) ಗ್ಯಾಸ್‌ನ್ನು 0.77 ಡಾಲರ್‌ಗಳಿಗೆ ಪಡೆಯುತ್ತಿವೆ. ಆರು ವರ್ಷಗಳ ನಂತರವಷ್ಟೇ ಅಲ್ಲಿ ಶೇ.15 ಮಾತ್ರ ಹೆಚ್ಚಳವಾಗಿದೆ. ಹೀಗಾಗಿ ದರ ಹೆಚ್ಚಳದ ಅಗತ್ಯವೇ ಇಲ್ಲವೆಂಬುದನ್ನು ಹೇಳಿದ್ದರು. ಇದಕ್ಕೂ ಮೊದಲು ಸಿಪಿಐ(ಎಂ)ನ ಸಂಸದರಾದ ದಿಪಂಕರ್ ಮುಖರ್ಜಿ ಹಲವು ಬಾರಿ ರಿಲಯನ್ಸ್ ಕಂಪನಿಯ ಬೋಗಸ್ ವಿಚಾರಗಳನ್ನು ಬಯಲಿಗೆಳೆದಿದ್ದರು. ಸಿಪಿಐನ ಗುರುದಾಸ್ ದಾಸ್‌ಗುಪ್ತ ಈ ಬಗ್ಗೆ ಪದೇ ಪದೇ ಸಂಸತ್ತಿನಲ್ಲಿ ಚರ್ಚಿಸಿದ್ದರು.

*ಭಾರತ ಜನ ಉತ್ತರ ಬಯಸುತ್ತಿರುವ ಇಂತಹ ಪ್ರಶ್ನೆಗಳಿಗೆ ವೀರಪ್ಪ ಮೊಯಿಲಿಯವರು ಮಾತನಾಡದೆ ಮೌನವಾಗಿದ್ದಾರೆ. ಈ ವಿಚಾರದಲ್ಲಿ ರಿಲಯನ್ಸ್ ಕಂಪನಿಯ ಹಗಲು ದರೋಡೆಯ ವಾದವನ್ನು ಬಿಟ್ಟು ಬೇರೆ ವಾದವನ್ನು ಇವರು ಮಾಡುತ್ತಿಲ್ಲ.*

ಇನ್ನು ವಿದೇಶಗಳಲ್ಲಿ ದರಗಳು ಹೇಗಿವೆ? ಭಾರತ ಸರ್ಕಾರದ ನಿವೃತ್ತ (ವಿದ್ಯುತ್ ಮತ್ತು ಇಂಧನ) ಪ್ರಧಾನ ಸಲಹೆಗಾರರಾದ ಶ್ರೀ ಸೂರ್ಯ ಸೇಥಿಯವರು 2013 ಜುಲೈ 1ರ ಹಿಂದೂ ಪತ್ರಿಕೆಯಲ್ಲಿ ಬರೆದ ಲೇಖನದಲ್ಲಿ ಈ ರೀತಿ ಹೇಳಿದ್ದಾರೆ : "ಜಗತ್ತಿನ ಯಾವುದೇ ಭಾಗದಲ್ಲೂ ದ್ರವೀಕೃತ ನೈಸರ್ಗಿಕ ಅನಿಲದ (LNG) ದರವನ್ನು ಅನಿಲ ಬಾವಿಗಳ (Well-Head Gas) ದರದೊಂದಿಗೆ ಜೋಡಿಸಿಲ್ಲ." ಸಾಮಾನ್ಯವಾಗಿ

ಬೆಂಚ್ ಮಾರ್ಕ್ ಎಂದು ಪರಿಗಣಿಸಲಾಗುವ ಹೆನ್ರಿ ಹಬ್ ಟರ್ಮಿನಲ್‌ನ (ಅಂದಿನ) ದರ ಪ್ರತಿ ಯೂನಿಟ್ (MMBTU) ಗ್ಯಾಸ್‌ಗೆ 3.77 ಡಾಲರ್‌ಗಳಾಗಿವೆ ಮತ್ತು ಇದು ಅಮೇರಿಕದಲ್ಲಿನ ಅನಿಲ ಬಾವಿ ದರಕ್ಕಿಂತಲೂ ತೀರಾ ಹೆಚ್ಚಾಗಿದೆ ಎಂದು ಸೇಥಿ ಹೇಳಿದ್ದಾರೆ. 2013 ನೇ ವರ್ಷದಲ್ಲಿ 3 ಡಾಲರ್ ಸುತ್ತಮುತ್ತಲೇ ಗ್ಯಾಸ್ ದರವಿದೆ. ಜೊತೆಗೆ ಪ್ರತಿ ಯೂನಿಟ್ (MMBTU) ಗ್ಯಾಸ್‌ಗೆ ಗಲ್ಫ್ ದೇಶಗಳಲ್ಲಿ ಕೇವಲ 1 ಡಾಲರ್ ಇದ್ದರೆ, ಈಜಿಪ್ಟ್‌ನಲ್ಲಿ 2.57 ಡಾಲರ್, ನೈಜೀರಿಯಾದಲ್ಲಿ 0.11 ಡಾಲರ್, ಆಸ್ಟ್ರೇಲಿಯಾದಲ್ಲಿ 5 ಡಾಲರ್, ಇಂಡೋನೇಷಿಯಾದಲ್ಲಿ ಸುಮಾರು 1 ಡಾಲರ್ ಇದೆ. ನಮಗಿಂತಲೂ ಆರ್ಥಿಕತೆಯಲ್ಲಿ ಸಣ್ಣ ದೇಶಗಳು ನಮಗಿಂತಲೂ ಕಡಿಮೆ ಬೆಲೆಗೆ ಗ್ಯಾಸ್ ಉತ್ಪಾದನೆ ಮಾಡುತ್ತಿರುವುದು ಇದರಿಂದ ತಿಳಿಯುತ್ತದೆ. ಚೀನಾದಲ್ಲಿ ಇತ್ತೀಚೆಗಷ್ಟೇ 4.7 ಡಾಲರ್‌ಗಳಿಗೆ ನಿಗದಿ ಮಾಡಲಾಗಿದೆ.

**ಆದರೆ ಜಪಾನ್, ಅಮೇರಿಕ ಮತ್ತು ಯೂರೋಪಿನ ಬಹುರಾಷ್ಟ್ರೀಯ ಕಂಪನಿಗಳ ಲೂಟಿಕೋರ ದರಗಳನ್ನು ಮಾನದಂಡವನ್ನಾಗಿ ಮಾಡಿಕೊಂಡು ವೀರಪ್ಪ ಮೊಯಿಲಿ 8.4 ಡಾಲರ್‌ಗಳಿಗೆ ನಿಗದಿ ಮಾಡಿದ್ದಾರೆ. ಇದರ ಹಿಂದಿನ ಉದ್ದೇಶ ಯಾರಿಗಾದರೂ ಅರ್ಥವಾಗುವುದಿಲ್ಲವೇ?**

4.2 ರಿಂದ 8.4 ಡಾಲರ್‌ಗಳಗೆ ಗ್ಯಾಸ್ ಖರೀದಿ ದರ ಹೆಚ್ಚಾದರೆ ರಿಲಯನ್ಸ್ ಕಂಪನಿಗೆ ಎಷ್ಟು ಲಾಭವಾಗುತ್ತದೆ?

ಒಂದು ಅಂದಾಜಿನ ಪ್ರಕಾರ ಪ್ರತಿ ಡಾಲರ್ ಹೆಚ್ಚಳಕ್ಕೆ ರಿಲಯನ್ಸ್‌ಗೆ 74 ಬಿಲಯನ್ ಡಾಲರ್ ಹೆಚ್ಚುವರಿ ಲಾಭ ಸಿಗುತ್ತದೆ. ಅಂದರೆ ಒಂದು ಡಾಲರ್ ಹೆಚ್ಚಳದಿಂದ ಪ್ರತಿ ವರ್ಷ 4.44 ಲಕ್ಷ ಕೋಟಿ ರೂಪಾಯಿ ರಿಲಯನ್ಸ್ ಕಂಪನಿ ಲೂಟಿ ಹೊಡೆಯುತ್ತದೆ. 4.2 ಡಾಲರ್ ಹೆಚ್ಚಳದಿಂದ ಒಂದು ವರ್ಷದಲ್ಲಿ ರಿಲಯನ್ಸ್‌ಗೆ ಸಿಗುವ ಹೆಚ್ಚುವರಿ ಲಾಭ 18 ಲಕ್ಷದ 64 ಸಾವಿರದ 800 ಕೋಟಿ ರೂಪಾಯಿಗಳು!

*ಮೊಯಿಲಿಯವರು ಯಾಕೆ ರಿಲಯನ್ಸ್ ಕಂಪನಿಯನ್ನು ಸಮರ್ಥಿಸುತ್ತಿದ್ದಾರೆ ಎಂಬುದಕ್ಕೆ ನಿಮಗೇನಾದರೂ ಈಗ ಗೊಂದಲವಿದೆಯೇ?*

ಖಾಸಗಿ ಬೃಹತ್ ಬಂಡವಾಳಶಾಹಿ ಕಂಪನಿಗಳು ಲಕ್ಷಾಂತರ ಕೋಟಿಗಳನ್ನು ಲೂಟಿ ಹೊಡೆಯಲು ಕಾಂಗ್ರೆಸ್ ಮತ್ತು ಬಿಜೆಪಿಯಂತಹ ರಾಜಕೀಯ ಪಕ್ಷಗಳೊಂದಿಗೆ ಶಾಮೀಲಾಗಿರುವುದರಿಂದ ಬೃಹತ್ ಭ್ರಷ್ಟಾಚಾರ ಪ್ರಕರಣಗಳು ನಡೆಯುತ್ತಿವೆ. ಮೊದಲೆಲ್ಲಾ ಸಣ್ಣ ಪ್ರಮಾಣದಲ್ಲಿ ನಡೆಯುತ್ತಿದ್ದ ಭ್ರಷ್ಟಾಚಾರ 1990ರ ನಂತರ ಲಕ್ಷ ಲಕ್ಷ ಕೋಟಿಗಳ ಲೆಕ್ಕದಲ್ಲಿ ನಡೆಯುತ್ತಿದೆ. ಎರಡು ದಶಕಗಳಿಂದೀಚೆಗೆ ಇದು ಬೃಹತ್ತಾಗಲು ಕಾರಣವೇನು? ಇಂತಹ ಪ್ರಶ್ನೆಗಳಿಗೆ ಉತ್ತರವಿರುವುದು ಸರ್ಕಾರದ ನೀತಿಗಳಿಗೆ ಸಂಬಂಧಿಸಿದ ಸಿದ್ಧಾಂತದಲ್ಲಿ. ಕಾಂಗ್ರೆಸಾಗಲೀ, ಬಿಜೆಪಿಯಾಗಲೀ ಜಾಗತೀಕರಣ–ಉದಾರೀಕರಣ–

ಖಾಸಗೀಕರಣದ ಸಿದ್ಧಾಂತಕ್ಕೆ ಕಟಿಬದ್ಧವಾಗಿವೆ. ಬಂಡವಾಳಿಗರ ಜೇಬು ತುಂಬಿಸುವ ಮಾರುಕಟ್ಟೆ ಆಧಾರಿತ ನೀತಿಗಳಿಗೆ ಬದ್ಧವಾಗಿವೆ. ಬಿಜೆಪಿಯ ವಾಜಪೇಯಿ ಸರ್ಕಾರ, ಆಡಳಿತಾತ್ಮಕ ಬೆಲೆ ಪದ್ಧತಿಯ (Administered Price Mechanism or Oil Pool Account) ನಿಯಂತ್ರಣಕ್ಕೆ ತೈಲ ಅಥವಾ ಗ್ಯಾಸ್ ಒಳಪಟ್ಟಿದ್ದನ್ನು ಕಳಚಿಹಾಕಿ ಬಂಡವಾಳಿಗರಿಗೆ ಪ್ರಿಯವಾದ ಮಾರುಕಟ್ಟೆ ಆಧಾರಿತ ಬೆಲೆ ಪದ್ಧತಿಗೆ ಬದಲಾಯಿಸಿತು. ಆ ನಂತರ ದೇಶೀಯ ಬೆಲೆಗಳು ಏನೇ ಆಗಿದ್ದರೂ ಜಪಾನ್, ಯೂರೋಪ್ ಮತ್ತು ಅಮೇರಿಕದ ಬೆಲೆಗಳೊಂದಿಗೆ ಸಮೀಕರಿಸಿ ನೋಡುವ ಅತಾರ್ಕಿಕ ಲೂಟಿಕೋರ ಪದ್ಧತಿ ಶುರುವಾಯಿತು.ಈ ನೀತಿಗಳೇ ಗ್ಯಾಸ್ ಬೆಲೆಯನ್ನು ತೀರ್ಮಾನಿಸಬೇಕು ಎಂಬುದು ರಿಲಯನ್ಸ್‌ನ ಅಂಬಾನಿ ಅಥವಾ ವೀರಪ್ಪ ಮೊಯಿಲಿಯವರಿಗೆ ಇರುವುದು.

*ಮೊಯಿಲಿಯವರ ಮತ್ತೊಂದು ವಾದವೆಂದರೆ, ವಿದೇಶಗಳಲ್ಲಿರುವ ದರಗಳಿಗೆ ಸಮನಾಗಿ ದೇಶದಲ್ಲಿ ಉತ್ಪಾದನೆಯಾಗುವ ಗ್ಯಾಸ್‌ಗೂ ಬೆಲೆ ನೀಡದಿದ್ದರೆ ಗ್ಯಾಸ್ ಉತ್ಪಾದನೆಯಲ್ಲಿ ಖಾಸಗಿ ಬಂಡವಾಳದಾರರು ಹೂಡಿಕೆ ಮಾಡುವುದಿಲ್ಲ.* ಇದನ್ನು ಸಮರ್ಥಿಸುವಂತಹ ಯಾವುದೇ ಅಂಕಿ–ಅಂಶಗಳನ್ನು ಮೊಯಿಲಿಯವರು ಇದುವರೆಗೂ ನೀಡಿಲ್ಲ. ಕಳೆದ 10 ವರ್ಷಗಳಿಗಿಂತಲೂ ಹೆಚ್ಚಿನ ಕಾಲದಿಂದ ಅಂತರ್ರಾಷ್ಟ್ರೀಯ ಬೆಲೆಗಳನ್ನು ತೈಲ ಉತ್ಪಾದಕರಿಗೆ ನೀಡಲಾಗುತ್ತಿದ್ದರೂ ಭಾರತದ ತೈಲ ಕ್ಷೇತ್ರಗಳನ್ನು ಅಭಿವೃದ್ಧಿಪಡಿಸಲಾಗಲೀ ಅಥವಾ ಸ್ಥಾಪಿಸಲಾಗಲೀ ವಿದೇಶೀ ಬಂಡವಾಳ ನುಗ್ಗಿಕೊಂಡೇನೂ ಬರುತ್ತಿಲ್ಲ.

**ಮೊಯಿಲಿಯವರ ಮತ್ತೊಂದು ಅಸಂಬದ್ಧ ವಾದವೆಂದರೆ, ದೇಶದೊಳಗಿನ ಗ್ಯಾಸ್ ಬೆಲೆಯನ್ನು ನಾವು ಎರಡು ಪಟ್ಟು ಮಾಡದಿದ್ದಲ್ಲಿ ದೇಶೀಯ ಗ್ಯಾಸ್‌ಗೆ, ಆಮದು ಮಾಡಿಕೊಳ್ಳುವ ಗ್ಯಾಸ್‌ಗಿಂತಲೂ ಹೆಚ್ಚಿನ ಬೆಲೆಯನ್ನು ತೆರಬೇಕಾಗುತ್ತದೆ. ರಿಲಯನ್ಸ್‌ನ ಅಂಬಾನಿಗೆ ಎರಡು ಪಟ್ಟು ಬೆಲೆಯನ್ನು ಕೊಡುವುದರಿಂದ ಭಾರತದ ಜನ ಸಂತೋಷಪಡುತ್ತಾರೆ ಎಂದು ಮೊಯಿಲಿಯವರು ನಂಬಿದ್ದಾರೆ!**

ಇಂತಹ ಕಾರಣಗಳಿಂದ ಭಾರತದ ಬಡ–ಮಧ್ಯಮ ವರ್ಗದ ಜನ ತೀರಾ ದುಬಾರಿಯಾದ ಗ್ಯಾಸ್ ಉಪಯೋಗಿಸಬೇಕಾಗುತ್ತದೆ ಮಾತ್ರವಲ್ಲ ಭಾರತ ಸರ್ಕಾರಕ್ಕೆ ತುಂಬಾ ನಷ್ಟವಾಗುತ್ತದೆ. ದೇಶದಲ್ಲಿರುವ ಗ್ಯಾಸ್ ಆಧಾರಿತ ವಿದ್ಯುತ್ ಸ್ಥಾವರಗಳು ವಿದೇಶೀ ಗ್ಯಾಸ್‌ನ ದುಬಾರಿ ದರಗಳ ಕಾರಣದಿಂದಾಗಿ ಈಗಾಗಲೇ ಪೂರ್ಣ ಪ್ರಮಾಣದಲ್ಲಿ ಉತ್ಪಾದನೆ ಮಾಡುತ್ತಿಲ್ಲ ಅಥವಾ ನಿಷ್ಕ್ರಿಯವಾಗಿವೆ. ಒಂದು ವೇಳೆ ದೇಶೀಯ ಗ್ಯಾಸ್ ಕೂಡಾ ಆಮದು ದರಗಳಿಗೆ ಸಮನಾದರೆ, 28,000 ಮೆ.ವ್ಯಾ.ಗ್ಯಾಸ್ ಆಧಾರಿತ ವಿದ್ಯುತ್ ಸ್ಥಾವರಗಳು ಮುಚ್ಚಬೇಕಾಗುತ್ತವೆ ಅಥವಾ ವಿಪರೀತವಾಗಿ ವಿದ್ಯುತ್ ಸಬ್ಸಿಡಿಗಳನ್ನು ನೀಡಬೇಕಾಗುತ್ತದೆ. ಇನ್ನೂ ಹೆಚ್ಚಿನ ಸಬ್ಸಿಡಿಗಳನ್ನು ನೀಡುವ ಸಾಧ್ಯತೆ ಕಡಿಮೆಯಿರುವುದರಿಂದ ವಿದ್ಯುತ್ ದರಗಳನ್ನು ಮೂರ್‍ನಾಲ್ಕು ಪಟ್ಟು ಹೆಚ್ಚಿಸಬೇಕಾಗುತ್ತದೆ.

ಜನರ ಮೇಲೆ ಹೊರೆ ಏರಿ ಜೇಬು ಕತ್ತರಿಸಬೇಕಾಗುತ್ತದೆ. ಮೊಯಿಲಿಯವರು ಮಾಡಲು ಹೊರಟಿರುವುದು ಕೊನೆಯ ಅಂಶವನ್ನು.

**ಇದರಲ್ಲಿ ಮತ್ತೊಂದು ವಿಶೇಷವಾದ ಸಂಗತಿಯೇನೆಂದರೆ ಬಿಜೆಪಿ ಮತ್ತು ಅದರ ಪ್ರಧಾನಿ ಅಭ್ಯರ್ಥಿ ನರೇಂದ್ರ ಮೋದಿಯವರ ಜಾಣ ಮೌನ. ಗ್ಯಾಸ್ ದರಗಳ ಬಗ್ಗೆ ಅವರು ಮಾತನಾಡುತ್ತಿಲ್ಲ. ಕಾಂಗ್ರೆಸ್‌ನ ಈ ನೀತಿಗಳನ್ನೇ ಇನ್ನಷ್ಟು ದೃಢವಾಗಿ ಮತ್ತು ದೊಡ್ಡದಾಗಿ ಬಂಡವಾಳಿಗರ ಪರವಾಗಿ ಜಾರಿಗೆ ತರಲು ಬಿಜೆಪಿ ಸಿದ್ಧವಿದೆ. ಹಿಂದೆ ವಾಜಪೇಯಿ ಸರ್ಕಾರವಿದ್ದಾಗ ವಿಎಸ್‌ಎನ್‌ಎಲ್, ಐಪಿಸಿಎಲ್ ಮತ್ತು ಸೆಂಟಾರ್‌ಗಳನ್ನು ಮೂರು ಕಾಸಿಗೆ ಮಾರಿದ್ದು ಮತ್ತು ಪ್ರಮುಖವಾದ ಟೆಲಿಕಾಂ ಹಗರಣಗಳು ನಡೆದದ್ದನ್ನು ಇಷ್ಟು ಬೇಗ ಮರೆಯಲು ಹೇಗೆ ಸಾಧ್ಯ? ಈ ವಿಚಾರದಲ್ಲಿ ಮೋದಿ ಸರ್ಕಾರದ್ದು ಕೂಡಾ ಇದೇ ದಾಖಲೆಯಿದೆ.**

ಕೆಜಿ ಕಣಿವೆಯ ಬ್ಲಾಕ್‌ಗಳಲ್ಲಿ ಟ್ರಿಲಿಯಾಂತರ ಡಾಲರುಗಳ ಗ್ಯಾಸ್‌ನ ಒಡೆತನವನ್ನು ಹೊಂದಿದ್ದ ಮೋದಿ ಸರ್ಕಾರ ಅದರಲ್ಲಿ ಶೇ.10 ರಷ್ಟನ್ನು ಬಾರ್ಬಡೋಸ್ ಮೂಲದ ಕೇವಲ 64 ಡಾಲರುಗಳ ಷೇರು ಬಂಡವಾಳವನ್ನು ಹೊಂದಿದ್ದ ಕೇವಲ ಆರು ದಿನಗಳ ಕಂಪನಿಗೆ ಮಾರಾಟ ಮಾಡಿತ್ತು. ಆದರೆ ಸಾರ್ವಜನಿಕ ಒತ್ತಡದಿಂದಾಗಿ ವಾಪಸ್ ಪಡೆದಿತ್ತು. ಗುಜರಾತ್‌ನಲ್ಲಿ ಅದಾನಿ ಮತ್ತು ಟಾಟಾ ಕಂಪನಿಗಳಿಗೆ ಸಾವಿರಾರು ಕೋಟಿ ರೂಪಾಯಿಗಳ ಲೂಟಿಗೆ ಅವಕಾಶ ಕೊಟ್ಟಿರುವ ಮೋದಿ ಪ್ರಧಾನಿಯಾದರೆ ರಿಲಯನ್ಸ್ ಕಂಪನಿಗೆ ಅಥವಾ ಖಾಸಗಿ ಕಂಪನಿಗಳಿಗೆ ಯಾವ ರೀತಿ ಸೇವೆ ಸಲ್ಲಿಸಬಹುದು ಎಂಬುದನ್ನು ಊಹಿಸುವುದು ಕಷ್ಟವಲ್ಲ. ಈ ಅದಾನಿ ಕಂಪನಿಯೇ ಕರ್ನಾಟಕದಲ್ಲಿ ಯಡಿಯೂರಪ್ಪನ ಸರ್ಕಾರವಿದ್ದಾಗ ಕದ್ದು ಕಲ್ಲಿದ್ದಲ್ಲನ್ನು ಬೆಲೆಕೇರಿಯಿಂದ ಸಾಗಿಸಿದ್ದು ಎಂಬುದನ್ನು ನಾವು ಮರೆಯುವಂತಿಲ್ಲ. ಗ್ಯಾಸ್ ಆದರೆ ಮುಖೇಶ್ ಅಂಬಾನಿ (ಕೆಜಿ ಹಗರಣ), ಕಲ್ಲಿದ್ದಲು (ಕೋಲ್ಗೇಟ್ ಹಗರಣ) ಅಥವಾ ತರಂಗಾಂತರವಾದರೆ (2ಜಿ ಹಗರಣ) ಅನಿಲ್ ಅಂಬಾನಿ ಇವರಿಗಾಗಿ ಅಥವಾ ಇಂತಹ ಸ್ವದೇಶೀ ಮತ್ತು ವಿದೇಶೀ ಖಾಸಗಿ ಬಂಡವಾಳದಾರರಿಗಾಗಿ ನೈಸರ್ಗಿಕ ಸಂಪತ್ತನ್ನು ಮುಕ್ಕಾಸಿನ ಬೆಲೆ ಕಟ್ಟಿ ಲೂಟಿಗೆ ಬಿಡಲಾಗಿದೆ. ದೇಶದ ಜನರನ್ನು ದೇಶದ ನೈಸರ್ಗಿಕ ಸಂಪತ್ತನ್ನು ಕಾಪಾಡಬೇಕಾದ ಸರ್ಕಾರಗಳು ತಾವೇ ಎದ್ದು ಮೇಯುತ್ತಿವೆ. ಕಳ್ಳತನ ಮಾಡುವವರನ್ನು ಕಾವಲು ಕಾಯಲು ನೇಮಿಸಿದಂತಿದೆ. ಈ ವಿಚಾರದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಒಂದೇ ನಿಲುವನ್ನು ಹೊಂದಿವೆ. ಇನ್ನು ಗ್ಯಾಸ್ ವಿಚಾರದಲ್ಲಿ ಮೊಯಿಲಿಯವರ ಮೇಲೆ ಕೇಸ್ ದಾಖಲಿಸಿರುವ ಆಮ್ ಆದ್ಮಿ ಪಾರ್ಟಿ ಭ್ರಷ್ಟಾಚಾರ ನಡೆದಿದೆ ಎಂದು ಹೇಳುತ್ತಿದೆಯೇ ಹೊರತು ಅದರ ಮೂಲದಲ್ಲಿರುವ ಮಾರುಕಟ್ಟೆ ನೀತಿಗಳನ್ನು ವಿರೋಧಿಸುತ್ತಿಲ್ಲ.

ರಿಲಯನ್ಸ್‌ನ ಅಂಬಾನಿಗೆ
ಎರಡು ಪಟ್ಟು ಬೆಲೆಯನ್ನು
ಕೊಡುವುದರಿಂದ ಭಾರತದ
ಜನ ಸಂತೋಷಪಡುತ್ತಾರೆ
ಎಂದು ಮೊಯಿಲಿಯವರು
ನಂಬಿದ್ದಾರೆಯೇ?





ಇನ್ನೊಂದೆಡೆ ಗಮನಿಸಬೇಕಾದ್ದು ಬಿಜೆಪಿ ಮತ್ತು
ಅದರ ಪ್ರಧಾನಿ ಅಭ್ಯರ್ಥಿ ನರೇಂದ್ರ
ಮೋದಿಯವರ ಜಾಣ ಮೌನ.
ಗ್ಯಾಸ್ ದರಗಳ ಬಗ್ಗೆ ಅವರು ಮಾತನಾಡುತ್ತಿಲ್ಲ.



**ಗ್ಯಾಸ್ ಬೆಲೆ ಹೆಚ್ಚಳದಿಂದ ಜನರ ಮೇಲಾಗುವ ಪರಿಣಾಮಗಳು**

ರಸಗೊಬ್ಬರ ಮತ್ತು ವಿದ್ಯುತ್ ಇಲಾಖೆಗಳು ಗ್ಯಾಸ್ ಬೆಲೆ ಹೆಚ್ಚಳದಿಂದ ಆಗಬಹುದಾದ ನಷ್ಟವನ್ನು ಲೆಕ್ಕ ಮಾಡಿವೆ.

* ಅದರ ಪ್ರಕಾರ ರಸಗೊಬ್ಬರದ ಸಬ್ಸಿಡಿಯು ವಾರ್ಷಿಕವಾಗಿ ರೂ.16,992 ಕೋಟಿಗಳಷ್ಟು ಹೆಚ್ಚಾಗುತ್ತದೆ.

* ಅದೇ ರೀತಿ ವಿದ್ಯುತ್ ಕ್ಷೇತ್ರದ ಸಬ್ಸಿಡಿಯು ವಾರ್ಷಿಕವಾಗಿ ರೂ.43,360 ಕೋಟಿ ಹೆಚ್ಚಾಗುತ್ತದೆ.

* 2013 ರಿಂದ 2017 ರವರೆಗೆ ನಾಲ್ಕು ವರ್ಷಗಳಿಗೆ ರೂ.2,40,000 ಕೋಟಿಗಳಷ್ಟು ಹೆಚ್ಚುವರಿಯಾಗುತ್ತದೆ.

* ಐದನೇ ವರ್ಷ ಗ್ಯಾಸ್ ಬೆಲೆ ಪ್ರತಿ ಯೂನಿಟ್‌ಗೆ 14 ಡಾಲರ್‌ಗಳಿಗೆ ಹೆಚ್ಚಾಗಿರುತ್ತದೆ ಎಂಬುದನ್ನು ಲೆಕ್ಕ ಮಾಡಿದರೆ ಒಟ್ಟಾರೆ ಐದು ವರ್ಷಗಳಿಗೆ 4,00,000 ಕೋಟಿ ರೂಗಳು ಹೊರೆಯಾಗುತ್ತದೆ.

* ಗ್ಯಾಸ್ ಬಳಸಿ ವಿದ್ಯುತ್ ತಯಾರಿಸುವ ಘಟಕಗಳ 28,000 ಮೆ.ವ್ಯಾ. ವಿದ್ಯುತ್ ಉತ್ಪಾದನೆ ಕುಸಿಯಲಿದೆ ಅಥವಾ ನಿಂತು ಹೋಗಲಿದೆ.

* ಕನಿಷ್ಟವೆಂದರೂ 3 ರೂಗಳಷ್ಟು ಪ್ರತಿ ಯೂನಿಟ್ ವಿದ್ಯುತ್ ದರ ಹೆಚ್ಚಲಿದೆ. **ವಿದ್ಯುತ್ ಬಳಸುವ ಪ್ರತಿಯೊಬ್ಬರೂ ರಿಲಯನ್ಸ್ ಕಂಪನಿಗಾಗಿ ತಮ್ಮ ಜೇಬಿಗೆ ಕತ್ತರಿ ಹಾಕಿಸಿಕೊಳ್ಳಬೇಕು.**

* ಪ್ರತಿ ಕ್ವಿಂಟಾಲ್ ರಸಗೊಬ್ಬರ ಸುಮಾರು 1000 ರೂ. ಹೆಚ್ಚಾಗಲಿದೆ. ಕೃಷಿ **ಮಾಡುವುದು ಮತ್ತಷ್ಟು ದುಬಾರಿಯಾಗಲಿದೆ. ಆಹಾರ ಪದಾರ್ಥಗಳ ಉತ್ಪಾದನೆ ಕುಸಿಯಲಿದೆ. ಕೃಷಿ ವ್ಯಾಪಾರದ ಖಾಸಗಿ ಕಂಪನಿಗಳ ದಗಲುಬಾಜಿತನ ಹೆಚ್ಚಾಗಲಿದೆ. ರೈತರ ಜೀವನ ಮತ್ತಷ್ಟು ಪಾತಾಳ ಮುಟ್ಟಲಿದೆ.**

* ಜನಸಾಮಾನ್ಯರು ಪ್ರತಿ ಗ್ಯಾಸ್ ಸಿಲಿಂಡರ್‌ಗೆ ಮೂರ್‍ನಾಲ್ಕು ಪಟ್ಟು ಹೆಚ್ಚು ಪಾವತಿಸಬೇಕಾಗುತ್ತದೆ. ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ ಬೆಲೆಯೂ ಹೆಚ್ಚುತ್ತದೆ. ಇದರ ಸುರುಳಿ ಪರಿಣಾಮವಾಗಿ ಎಲ್ಲಾ ವಸ್ತುಗಳ ಬೆಲೆಗಳು ಏರಿಕೆಯಾಗುತ್ತವೆ. ಜನಜೀವನ ಮತ್ತಷ್ಟು ದುಸ್ತರವಾಗಲಿದೆ.

* ಸಿಎನ್‌ಜಿ ಬಳಸುವ ಸಾರ್ವಜನಿಕ ಸಾರಿಗೆ ದರಗಳು ದುಬಾರಿಯಾಗುತ್ತದೆ. ಸಾರಿಗೆ ದರಗಳು ಹೆಚ್ಚುವುದರಿಂದ ಸರಕು ಮತ್ತು ಸೇವೆಗಳು ದುಬಾರಿಯಾಗಲಿವೆ. ಎಲ್ಲ ವಸ್ತುಗಳ ಬೆಲೆಗಳು ಏರಿಕೆಯಾಗುತ್ತವೆ. ಸರ್ಕಾರವೇನೋ ಸಬ್ಸಿಡಿ ಕೊಟ್ಟು

ಜನರ ಹಿತ ಕಾಪಾಡುತ್ತೇವೆಂದು ಹೇಳಬಹುದು. ಆದರೆ ದೇಶಕ್ಕೆ ನೀಡಬಹುದಾದ ಸಬ್ಸಿಡಿಯನ್ನೆಲ್ಲಾ ಅಂಬಾನಿಗೆ ಮತ್ತು ಅಂತಹವರಿಗೆ ನೀಡುವುದರಿಂದ ಜನರಿಗೆ ಸಬ್ಸಿಡಿ ನೀಡಲು ಹಣವಿರುವುದಿಲ್ಲ.

**ಇವು ಸನ್ಮಾನ್ಯ ಶ್ರೀ ವೀರಪ್ಪ ಮೊಯಿಲಿಯವರು ಜನರಿಗೆ ಮಾಡುತ್ತಿರುವ ಉಪಕಾರಗಳು!**

**ಇಂತಹವರನ್ನು ಮತ್ತೆ ಲೋಕಸಭೆಗೆ ಆರಿಸಿದರೆ ರಾತ್ರಿ ಕಂಡ ಬಾವಿಗೆ ಹಗಲು ಬಿದ್ದಂತಾಗುತ್ತದೆ.**


**ಇನ್ನು ಇದೇ ನೀತಿಗಳನ್ನು ಅನುಸರಿಸುವ ಬಿಜೆಪಿಗೆ ಮತ ಹಾಕುವುದು ಇನ್ನಷ್ಟು ಅಪಾಯಕಾರಿ.**

ಆದ್ದರಿಂದ ಈ ಎಲ್ಲಾ ವಿಚಾರಗಳಲ್ಲಿ ಸ್ಪಷ್ಟವಾದ ನಿಲುವುಗಳನ್ನು ಹೊಂದಿ ದೃಢವಾದ ಹೋರಾಟವನ್ನು ಮಾಡುತ್ತಿರುವ ಸಿಪಿಐ(ಎಂ) ಪಕ್ಷಕ್ಕೆ ಓಟು ಕೊಟ್ಟು ಗೆಲ್ಲಿಸಿ.


**ಕೃತಜ್ಞತೆಗಳು:**

ಲೇಖಕರು:
ಕೆ.ಪ್ರಕಾಶ್

ವ್ಯಂಗ್ಯಚಿತ್ರಕಾರರು:
ಕೇಶವ್
ಸತೀಶ್ ಆಚಾರ್ಯ
ಕುರೀಲ್
ಪಿ.ಮಹಮ್ಮದ್
ಮತ್ತಿತರರು
ಕೃಪೆ: ಅಂತರ್ಜಾಲ ಸಂಗ್ರಹ



ರಿಲಯಂಸ್‌ನಿಂದ
ರಿಲಯಂಸ್‌ಗಾಗಿ
ರಿಲಯಂಸ್ !

ಚಮಚಾ
ಬಂಡವಾಳಶಾಹಿಗಳೂ
ಮತ್ತು ಚಮಚಾಗಳೂ

ಕಡಿಮೆ
ಪೆಟ್ರೋಲ್
ಖರ್ಚು
ಮಾಡು!
ಗೊತ್ತಾಯಾ
ಮಾರಾಯ?

ಅಡುಗೆಯನ್ನೂ
ಕಡಿಮೆ ಮಾಡು!



# ಕಾಂಗ್ರೆಸನ್ನು ತಿರಸ್ಕರಿಸಿ,
# ಬಿಜೆಪಿಯನ್ನು ಸೋಲಿಸಿ
# ಸಿಪಿಐ(ಎಂ)ಗೆ ಮತ ನೀಡಿ

## ಒಂದು ಜಾತ್ಯಾತೀತ ಮತ್ತು
## ಪ್ರಜಾಸತ್ತಾತ್ಮಕ ಪರ್ಯಾಯಕ್ಕಾಗಿ
# ಎಡಪಕ್ಷಗಳನ್ನು ಬಲಪಡಿಸಿ

ಬೆಲೆ : ರೂ. 5.00

ಲೇಖಕರು: ಕೆ.ಪ್ರಕಾಶ್

ಪ್ರಕಟಣೆ:
ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)
ಕರ್ನಾಟಕ ರಾಜ್ಯ ಸಮಿತಿ
ನಂ. 37/ಎ, 8ನೇ ಅಡ್ಡರಸ್ತೆ, ಮಹಾಲಕ್ಷ್ಮಿ ಲೇಔಟ್, ಬೆಂಗಳೂರು – 560086

ಮುದ್ರಣ: ಕ್ರಿಯಾ, ಎಸ್.ಆರ್. ನಗರ, ಬೆಂಗಳೂರು
ಪ್ರತಿಗಳು: 5,000